KAUK010007802019

**ದಿನಾಂಕಃ 31-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿಗಳ ಪರ ಶ್ರೀ ಎಲ್.ಎಸ್. ಕುರಿ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಹೀಗೆ 10 ವರ್ಷಗಳ ಹಿಂದೆ ಚಾಸಾ 19 ರವರ ಪರಿಚಯ ನನಗೆ ಇತ್ತು, ಈಗ ಇಲ್ಲ. ಅದೇ ರೀತಿ ಮೃತ ಪ್ರೇಮಕುಮಾರನ ಪರಿಚಯ ನನಗೆ ಇರುವುದಿಲ್ಲ. ದಿನಾಂಕಃ 23-10-2018 ರಂದು ನನಗೆ ಠಾಣೆಗೆ ಬರುವಂತೆ ಚಾಸಾ 19 ರವರು ಕರೆದಿದ್ದರು. ಅದರಂತೆ ನಾನು ಠಾಣೆಗೆ ಹೋಗಿರುತ್ತೇನೆ. ಆ ದಿನ ಪೋಲೀಸ್ ಠಾಣೆಗೆ ಹೋದಾಗ ಸಂಜೆ 7.00 ಗಂಟೆ ಆಗಿರುತ್ತದೆ. ಆ ದಿನ ಪೋಲೀಸ್ ಜೀಪ್ ನಲ್ಲಿ 4-5 ಜನ ಕಾರವಾರದ ಸಿವಿಲ್ ಆಸ್ಪತ್ರೆಗೆ ಹೋಗಿರುತ್ತೇವೆ. ನಿಪಿ 1 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರು ಬರೆದ ಪಂಚನಾಮೆಗೆ ರುಜು ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಬೈಕ್ ಜಪ್ತುಪಡಿಸಿಕೊಳ್ಳದಿದ್ದರೂ ಸಹ, ಪಂಚನಾಮೆ ಮಾಡಿ, ಬೈಕ್ ಜಪ್ತುಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು, ಸ್ಥಳದಲ್ಲಿಯೇ ಪಂಚನಾಮೆಗೆ ರುಜು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕಃ 26-10-2018 ರಂದು ಮಾಡಿದ ಪಂಚನಾಮೆಗೆ ಚಾಸಾ 19 ರವರು ಬಂದಿರಲಿಲ್ಲ. ಆ ದಿನ ಪೋಲೀಸರು ನನಗೆ ಪಂಚರಾಗಿ ಬರುವಂತೆ ನೋಟೀಸು ನೀಡಿದ್ದರು. ಆ ದಿನ ನಾನು ಬೆಳಿಗ್ಗೆ 5.30 ಗಂಟೆಗೆ ಹೋಗಿರುತ್ತೇನೆ. ನಂತರ, 2 ನೇ ಆರೋಪಿ ನನ್ನನ್ನು, ಪೋಲೀಸರನ್ನು ಹಾಗೂ ಚಾಸಾ 8 ರವರನ್ನು ಕಧ್ರಾ ಬಳಿಯ ಗಣೇಶಗುಡಿಯ ಹತ್ತಿರ ಕರೆದುಕೊಂಡು ಹೋಗಿರುತ್ತಾನೆ. ನಾವು ಗಣೇಶಗುಡಿ ತಲುಪಿದಾಗ, ಸೂರ್ಯೋದಯವಾಗಿರಲಿಲ್ಲ. ನಾವು ಅಲ್ಲಿಗೆ ಹೋದಾಗ, ಪೋಲೀಸರು 2 ನೇ ಆರೋಪಿಯನ್ನು ಪೋಲೀಸ್ ವ್ಯಾನ್ ನಿಂದ ಕೆಳಗೆ ಇಳಿಸಿದರು, ಆಗ 2 ನೇ ಆರೋಪಿಯು ನಾನು ಇದೇ ಜಾಗದಲ್ಲಿ ಬಟ್ಟೆ ಹಾಗೂ ಕತ್ತಿಯನ್ನು ಎಸೆದಿರುತ್ತೇನೆ ಎಂದು ಹೇಳಿರುತ್ತಾನೆ. ನಿಪಿ 4 ರಲ್ಲಿ ಪೋಲೀಸರು ನಮಗೆ ಇದೇ ರೀತಿ ನಿಲ್ಲಬೇಕು ಎಂದು ಹೇಳಿದ್ದರು ಎಂದರೆ ಸರಿ ಅಲ್ಲ.

ನಿಪಿ 4 ಛಾಯಾಚಿತ್ರವನ್ನು ಪೋಲೀಸರು ತೆಗೆದಿರುತ್ತಾರೆ. ಪೋಲೀಸರು ಕತ್ತಿಯನ್ನು ಜಪ್ತುಪಡಿಸಿಕೊಂಡು ಅದನ್ನು ಸೀಲ್ ಮಾಡಿ, ನನ್ನ ರುಜುವನ್ನು ಪಡೆದುಕೊಂಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ.

3 ನೇ ಆರೋಪಿಯ ಮನೆಯ ಹತ್ತಿರ ಪಂಚನಾಮೆ ಮುಗಿದಾಗ ಸಮಯ ಮಧ್ಯಾಹ್ನ 3.00 ಗಂಟೆ ಆಗಿರುತ್ತದೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಕೇಳಲಾಗಿ, ಸಾಕ್ಷಿಯು ಮೊಬೈಲ್, ಬಟ್ಟೆ , ಬಂಗಾರದ ಚೈನ್ ಸಿಕ್ಕಿದ ಬಗ್ಗೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿನ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. 3 ನೇ ಆರೋಪಿಯ ಮನೆಯ ಹತ್ತಿರ ಸುಮಾರು ಅರ್ಧ ತಾಸು ಪಂಚನಾಮೆಯನ್ನು ಬರೆದಿರುತ್ತಾರೆ. ನಿಪಿ 7 ನ್ನು ಪೋಲೀಸರೇ ಬರೆದರು. ಪಂಚನಾಮೆಯನ್ನು ಬರೆಯಲು ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. 3 ನೇ ಆರೋಪಿಯ ಮನೆಯಿಂದ 2 ನೇ ಆರೋಪಿಯ ಮನೆಗೆ ಸುಮಾರು ಅರ್ಧ ಕಿ.ಮೀ. ದೂರ ಇರುತ್ತದೆ. ನಿಪಿ 6 ಮತ್ತು 8 ರಲ್ಲಿ ಪೋಲೀಸರು ಪಂಚನಾಮೆ ಮಾಡಿದ ಬಗ್ಗೆ ಛಾಯಾಚಿತ್ರ ತೆಗೆಯಲು ಹೇಳಿದ ಮೇರೆಗೆ ನಾವು ನಿಂತಿರುತ್ತೇವೆ. ಪೋಲೀಸರು ಮೊಬೈಲ್, ಬಟ್ಟೆ , ಬಂಗಾರದ ಚೈನ್, ಕತ್ತಿಯನ್ನು ಜಪ್ತುಪಡಿಸಿಕೊಳ್ಳುವಾಗ, ಅದರ ಮೇಲೆ ಯಾವ ಗುರುತುಗಳನ್ನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಠಾಣೆಗೆ ವಾಪಸ್ಸು ಬಂದಾಗ ಸುಮಾರು ಸಂಜೆ 6.00 ಗಂಟೆ ಆಗಿರುತ್ತದೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿ ಅಲ್ಲ. ಚಾಸಾ 19 ರವರು ನನಗೆ ಪರಿಚಯವಿದ್ದು, ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ**

ಪೋಲೀಸರು ನನ್ನನ್ನು ಯಾವುದೇ ಪಂಚನಾಮೆಗೆ ಕರೆದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ಛಾಯಾಚಿತ್ರ ತೆಗೆದಿಲ್ಲ, ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿ ಅಲ್ಲ. ಈ ಪ್ರಕರಣದ ಪಂಚನಾಮೆಗಳನ್ನು, ಛಾಯಾಚಿತ್ರಗಳನ್ನು ಹಾಗೂ ಮು. ಮಾಲುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಪೋಲೀಸರೇ ಸೃಷ್ಠಿ ಮಾಡಿದ್ದಾರೆ ಎಂದರೆ ಸರಿ ಅಲ್ಲ. ಪೋಲೀಸರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ –ಇಲ್ಲಾ–**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ